ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 3-3-92ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 6ನೇ ಪಟ್ಟಿಯಲ್ಲಿರುವ 83 ಪ್ರಶ್ನೆಗಳ ಪೈಕಿ 63 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಇಡುತ್ತಾ ಇದ್ದೇನೆ.

ಶಿರ್ವಾದಲ್ಲಿ ಪೋಲೀಸ್ ಠಾಣೆ ಕಟ್ಟಡ.

326 (506) ಶ್ರೀ ವಸಂತ್. ವಿ. ಸಾಲಿಯಾನ (ಕಾಪು):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರ್ವದಲ್ಲಿ ಪೋಲೀಸ್ ಠಾಣೆಗೆ ಸ್ವಂತ ಕಟ್ಟಡ ಇದೆಯೇ?

ಆ) ಇಲ್ಲವಾದಲ್ಲಿ ಯಾವಾಗ ಸ್ವಂತ ಕಟ್ಟಡವನ್ನು ಕಟ್ಟಿಸಲಾಗುವುದು?

ಇ) ಕಾಪುವಿನ ಹೊರ ಠಾಣೆಯ ವಸತಿ ಗೃಹ ನಿರ್ಮಾಣದ ಬಗ್ಗೆ ಸರ್ಕಾರದಿಂದ ಎಷ್ಟು ಎಕರೆ ಭೂಮಿಯನ್ನು ಯಾವಾಗ ಮಂಜೂರಾತಿಯಾಗಿದೆ?

ಈ) ಈ ವಸತಿ ಗೃಹವನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು);-

ಅ) ಇಲ್ಲ.

ಆ) ಆದ್ಯತೆ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಅನುಸರಿಸಿ ಪರಿಶೀಲಿಸಲಾಗುವುದು.

ಇ) 1954ರಲ್ಲಿ 0.80 ಎಕರೆ ಭೂಮಿಯು ಮಂಜೂರಾಗಿದೆ.

ಈ) ಹಣ ಒದಗಿಸಿದ ನಂತರ ಆದಷ್ಟು ಶೀಘ್ರವಾಗಿ ನಿರ್ಮಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯನ್ವಯ ಮನೆ ನಿವೇಶನಗಳನ್ನು ವಿತರಣೆ.

331 (508) ಶ್ರೀ ವಸಂತ್. ವಿ. ಸಾಲಿಯಾನ (ಕಾಪು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆಗೂ ಎಷ್ಟು ಮನ ನಿವೇಶನಗಳನ್ನು ವಿತರಿಸಲಾಗಿದೆ. ಇನ್ನೂ ಎಷ್ಟು ಬಾಕಿ ಇದೆ. ಇವುಗಳನ್ನು ಯಾವಾಗ ವಿತರಿಸಲಾಗುವುದು?

ಆ) ಈ ರೀತಿ ವಿತರಿಸಲಾದ ನಿವೇಶನಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗುವುದು. (ಪ್ರತಿಯೊಂದನ್ನು ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು.):-

ಅ) ಒಟ್ಟು 18,831

ಬಾಕಿ 2,564

ಕಾರ್ಯಕ್ರಮ ಮುಗಿದಿದೆ.

ಆ) ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ತಲಾ 1000 ದಂತೆ ಆರ್ಥಿಕ ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟಲು ಕಾರ್ಯಕ್ರಮ ಹಮ್ಮಿಕೊಂಡಿದೆ. (ತಾಲ್ಲೂಕುವಾರು ವಿವರ ಉದ್ಭವಿಸುವುದಿಲ್ಲ).